ನಂ1 ವಿಜಯವಾಣಿ

### ದಿಲೀಪಕುಮಾರ ತಾಳಂಪಳ್ಳಿ ಅನಿಸಿಕೆ | ಬಸವಕಲ್ಯಾಣದಲ್ಲಿ ಪದವಿ ಪ್ರದಾನ ಸಮಾರಂಭ

# ಪರಿಶ್ರಮ ಆತ್ಮವಿಶ್ವಾಸವೇ ಯಶಸ್ಸಿಗೆ ದಾರಿ

**ವಿಜಯವಾಣಿ ಸುದ್ದಿಜಾಲ** ಬಸವಕಲ್ಯಾಣ

ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೊಸ ಅವಕಾಶಗಳು ತೆರೆದುಕೊಳ್ಳುವ ಜತೆಗೆ ಹೊಸ ಸವಾಲುಗಳು ಎದುರಾಗಲಿವೆ. ಯಾವುದೇ ಕ್ಷೇತ್ರದಲ್ಲಿದ್ದರು ಪರಿಶ್ರಮ, ಪ್ರಾಮಾಣಿಕತೆ ಮತ್ತು ಆತ್ಮವಿಶ್ವಾಸವೇ ನಿಮ್ಮ ಯಶಸ್ಸಿಗೆ ದಾರಿಯಾಗಲಿದೆ. ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಜ್ಞಾನವನ್ನು ಸಮಾಜದ ಒಳಿತಿಗೆ ದೇಶದ ಪ್ರಗತಿಗೆ ಬಳಸಿ ಎಂದು ವಿದ್ಯಾರ್ಥಿಗಳಿಗೆ ಬಿಇಟಿಯ ಉಪಾಧ್ಯಕ್ಷ, ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಸಲಹೆ ನೀಡಿದರು.

ನಗರದ ಬಸವಕಲ್ಯಾಣ ಎಜುಕೇಷನಲ್ ಟ್ರಸ್ಟ್(ಬಿಇಟಿ)ನ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪದವಿ ಪಡೆದರೆ ಸಾಲದು, ಪದವಿಯ ಜತೆಗೆ ಹೊಸಹೊಸ ತಂತ್ರಜ್ಞಾನಗಳ ಕುರಿತು ಸಂಶೋಧನೆ ಮಾಡಬೇಕು. ನಿರಂತರ ಅಧ್ಯಯನದ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಜೀವನದಲ್ಲಿ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರವೂ ಅವಶ್ಯಕ ಎಂದರು.

ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಎಂಬಿಎ ವಿಭಾಗದ ಸಂಯೋಜಕಿ ಡಾ.ಸುಷ್ಮಾ ಎಚ್. ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣ ಜತೆಗೆ ಆದರ್ಶ ಮೌಲ್ಯ ಬೆಳೆಸಿಕೊಳ್ಳಬೇಕು. ತಂದೆ-ತಾಯಿ, ಗುರು-ಹಿರಿಯರನ್ನು ಗೌರವಿಸಬೇಕು. ಅಂದಾಗ ಮಾತ್ರ ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾಲೇಜಿನ ನಿರ್ದೇಶಕ, ಪ್ರಾಚಾರ್ಯ ಡಾ.ಅಶೋಕಕುಮಾರ ವಣಗೇರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ, ವಿದ್ಯಾಭ್ಯಾಸ ಮುಗಿಸಿಕೊಂಡು ಹೊಸ ಜಗತ್ತಿಗೆ ಪ್ರವೇಶ ಮಾಡುತ್ತಿರುವ ತಾವೆಲ್ಲರೂ, ವಿದ್ಯಾರ್ಥಿ ಜೀವನದ ಈ ಸುಂದರ ದಿನಗಳು ಇಲ್ಲಿಗೆ ಮುಗಿಯುತ್ತಿದ್ದರೂ, ನಿಮ್ಮ ಭವಿಷ್ಯದ ಹೊಸ ಅಧ್ಯಾಯ ಇಲ್ಲಿಂದಲೇ ಆರಂಭವಾಗುತ್ತದೆ. ಮುಂದಿನ ದಿನಗಳು ನಿಮಗೆ ಹೊಸ ಅವಕಾಶಗಳನ್ನು ಮತ್ತು ಸವಾಲುಗಳನ್ನು ತರಲಿವೆ ಎಂದರು.

ಉಪಪ್ರಾಚಾರ್ಯ ಡಾ.ಅರುಣಕುಮಾರ ಯಲಾಲ, ಕುಲಸಚಿವ ಪ್ರೇಮಸಾಗರ ಪಾಟೀಲ, ವಿವಿಧ ವಿಭಾಗದ ಮುಖ್ಯಸ್ಥರಾದ ಸುವರ್ಣಲತಾ, ಡಾ.ಸಂಜೀವಕುಮಾರ ಜಲ್ದೆ, ಡಾ.ಅನೀಲ ಪಾಟೀಲ, ರಾಹುಲ ರೆಡ್ಡಿ, ವಿದ್ಯಾಸಾಗರ ಮೂಲಗೆ, ಗುರುರಾಜ ಪಟವಾರಿ ಇದ್ದರು. ಪ್ರೀತಿ ಬಿರಾದಾರ ನಿರೂಪಣೆ ಮಾಡಿದರು. ಹರೀಕಾ ಕಲ್ಲೂರ ಪದವಿ ಸಮಾರಂಭ ನಡೆಸಿಕೊಟ್ಟರು. ಡಾ.ಅನೀಲ ಪಾಟೀಲ ವಂದಿಸಿದರು.



**ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಪದವಿ ಪ್ರದಾನ ಸಮಾರಂಭವನ್ನು ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು. ಡಾ. ಸುಷ್ಮಾ ಎಚ್, ಡಾ.ಅಶೋಕಕುಮಾರ ವಣಗೇರಿ, ಡಾ.ಅರುಣಕುಮಾರ ಯಲಾಲ, ಪ್ರೇಮಸಾಗರ ಪಾಟೀಲ, ಸುವರ್ಣಲತಾ, ಡಾ.ಸಂಜೀವಕುಮಾರ ಜಲ್ದೆ, ಡಾ.ಅನೀಲ ಪಾಟೀಲ, ರಾಹುಲ ರೆಡ್ಡಿ, ವಿದ್ಯಾಸಾಗರ ಮೂಲಗೆ, ಗುರುರಾಜ ಪಟವಾರಿ ಇದ್ದರು.**

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪದವಿಯ ಜತೆಗೆ ತಾಂತ್ರಿಕ ಕೌಶಲ ಬೆಳೆಸಿಕೊಳ್ಳುವುದು ಅತ್ಯಾವಶ್ಯಕ. ಸಮಯ ಪ್ರಜ್ಞೆ, ಪರಿಶ್ರಮ, ಪ್ರಾಮಾಣಿಕತೆ ಜೀವನದಲ್ಲಿ ಯಶಸ್ವಿನ ದಾರಿ ಮಾಡಿಕೊಡುತ್ತವೆ. ಎದುರಾಗುವ ಸವಾಲುಗಳನ್ನು ಎದುರಿಸಿ, ದೊರೆಯುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು.

| ಸುಷ್ಮಾ ಎಚ್.
ಸಿಯುಕೆ ಎಂಬಿಎ ವಿಭಾಗದ ಸಂಯೋಜಕಿ

ಯಾವುದೇ ಕ್ಷೇತ್ರಕ್ಕೆ ಹೋದರೂ ನಿಮ್ಮ ಶ್ರಮ, ಶ್ರದ್ಧೆ, ಕೌಶಲ ಅಗತ್ಯ ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಂಡಾಗ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ. ನಿಮ್ಮ ಜ್ಞಾನವು ನಿಮ್ಮ ಭವಿಷ್ಯ ರೂಪಿಸಿಕೊಳ್ಳುವ ಜತೆಗೆ ಸಮಾಜದ ಒಳಿತಿಗೆ ಬಳಕೆಯಾಗಲಿ.

| ಡಾ.ಅಶೋಕಕುಮಾರ ವಣಗೇರಿ
ಪ್ರಾಚಾರ್ಯ ಬಿಕೆಇಸಿ

## ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಪದವಿ ಪ್ರದಾನ ಸಮಾರಂಭ

# 'ಪದವಿ ಜತೆ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಿ'

■ ಉದಯವಾಣಿ ಸಮಾಚಾರ



ಬಸವಕಲ್ಯಾಣ: ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಪದವಿ ಪ್ರದಾನ ಸಮಾರಂಭವನ್ನು ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು.

**ಬಸವಕಲ್ಯಾಣ:** ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು, ಪದವಿ ಮುಗಿಸಿದರೆ ಸಾಲದು, ಪದವಿಯ ಜತೆ-ಜತೆಗೆ ಹೊಸ-ಹೊಸ ತಂತ್ರಜ್ಞಾನದ ಬಗ್ಗೆ ಸಂಶೋಧನೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಬಿಇಟಿಯ ಉಪಾಧ್ಯಕ್ಷ ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಸಲಹೆ ನೀಡಿದರು.

ಬಸವಕಲ್ಯಾಣ ಎಜ್ಯುಕೇಷನಲ್ ಟ್ರಸ್ಟ್‌ನ ಬಸವಕಲ್ಯಾಣ ಇಂಜಿನಿ ಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 2025-2026 ಪದವಿ ಪ್ರದಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪದವಿ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅತ್ಯವಿರುವ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಅವಕಾಶಗಳು ತೆರೆದುಕೊಳ್ಳುವ ಜತೆಗೆ ಹೊಸ ಸವಾಲುಗಳು ಎದುರಾಗಲಿವೆ. ಯಾವುದೇ ಕ್ಷೇತ್ರದಲ್ಲಿದ್ದರು ಸಹ ನಿಮ್ಮ ಶ್ರಮ, ಪ್ರಾಮಾಣಿಕತೆ ಮತ್ತು ಆತ್ಮವಿಶ್ವಾಸವೇ ನಿಮ್ಮನ್ನು ಗೆಲ್ಲಿಸಲಿದೆ. ಜೀವನದಲ್ಲಿಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಜ್ಞಾನವನ್ನು ಸಮಾಜದ ಒಳಿತಿಗೆ ದೇಶದ ಅಭಿವೃದ್ಧಿಗೆ ಬಳಸಿ ಎಂದರು.

ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಎಂಬಿಎ ವಿಭಾಗದ ಸಂಯೋಜಕ ಡಾ। ಸುಷ್ಮಾ ಎಚ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪದವಿಯ ಜತೆಗೆ ತಾಂತ್ರಿಕ ಕೌಶಲ್ಯ ಹೊಂದುವದು ಅವಶ್ಯಕ. ವಿದ್ಯಾರ್ಥಿಗಳು ಶಿಕ್ಷಣ ಜತೆಗೆ ಆದರ್ಶ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ತಂದೆ-ತಾಯಿ, ಗುರು-ಹಿರಿಯರನ್ನು ಗೌರವಿಸಬೇಕು ಎಂದು ಹೇಳಿದರು.

ಕಾಲೇಜಿನ ನಿರ್ದೇಶಕ, ಪ್ರಾಚಾರ್ಯ ಡಾ। ಅಶೋಕಕುಮಾರ ವಣಗೇರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ, ವಿದ್ಯಾಭ್ಯಾಸ ಮುಗಿಸಿಕೊಂಡು ಹೊಸ ಜಗತ್ತಿಗೆ ಪ್ರವೇಶ ಮಾಡುತ್ತಿರುವ ತಾವೆಲ್ಲರೂ, ವಿದ್ಯಾರ್ಥಿ ಜೀವನದ ಈ ಸುಂದರ ದಿನಗಳು ಇಲ್ಲಿಗೆ ಮುಗಿಯುತ್ತಿದ್ದರೂ, ನಿಮ್ಮ ಭವಿಷ್ಯದ ಹೊಸ ಅಧ್ಯಾಯ ಇಲ್ಲಿಂದಲೇ ಆರಂಭವಾಗುತ್ತದೆ. ಮುಂದಿನ ದಿನಗಳು ನಿಮಗೆ ಹೊಸ ಅವಕಾಶಗಳನ್ನು ಮತ್ತು ಸವಾಲುಗಳನ್ನು ತರಲಿವೆ. ಯಾವುದೇ ಕ್ಷೇತ್ರಕ್ಕೆ ಹೋದರೂ, ನಿಮ್ಮ ಶ್ರಮ, ಶ್ರದ್ಧೆ ಕೌಶಲ್ಯ ಅಗತ್ಯ. ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿಕೊಂಡಾಗ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದರು.

ಉಪ-ಪ್ರಾಚಾರ್ಯ ಡಾ। ಅರುಣಕುಮಾರ ಯಲಾಲ, ಕಾಲೇಜಿನ ಕುಲಸಚಿವ ಪ್ರೇಮಸಾಗರ ಪಾಟೀಲ, ವಿವಿಧ ವಿಭಾಗದ ಮುಖ್ಯಸ್ಥರಾದ ಸುವರ್ಣಲತಾ, ಡಾ। ಸಂಜೀವಕುಮಾರ ಜಲ್ದೆ, ಡಾ। ಅನಿಲ ಪಾಟೀಲ, ರಾಹುಲ ರೆಡ್ಡಿ, ವಿದ್ಯಾಸಾಗರ ಮೂಲಗೆ, ಗುರುರಾಜ ಪಟವಾರಿ ಉಪಸ್ಥಿತರಿದ್ದರು. ಪ್ರೀತಿ ಬಿರಾದಾರ ನಿರೂಪಿಸಿದರು, ಪದವಿ ಪ್ರಶಸ್ತಿ ಸಮಾರಂಭವನ್ನು ಹರೀಕಾ ಕಲ್ಲೂರ ನಡೆಸಿಕೊಟ್ಟರು. ಡಾ। ಅನಿಲ ಪಾಟೀಲ ವಂದಿಸಿದರು.

ಪದವಿ ಪ್ರದಾನ ಕಾರ್ಯಕ್ರಮದಲ್ಲಿ ದಿಲೀಪಕುಮಾರ ತಾಳಂಪಳ್ಳಿ ಸಲಹೆ

# ‘ಅಧ್ಯಯನ, ಸಂಶೋಧನೆ ಕೈಗೊಳ್ಳಿ’

ಪ್ರಜಾವಾಣಿ ವಾರ್ತೆ



ಬಸವಕಲ್ಯಾಣದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ನಡೆದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ದಿಲೀಪಕುಮಾರ ತಾಳಂಪಳ್ಳಿ ದೀಪ ಬೆಳಗಿಸಿದರು. ಅಶೋಕಕುಮಾರ ವಣಗೇರಿ ಮತ್ತಿತರರು ಉಪಸ್ಥಿತರಿದ್ದರು

**ಬಸವಕಲ್ಯಾಣ:** ‘ಪದವಿ ಪಡೆದವರು ಮುಂದೆಯೂ ನಿರಂತರವಾಗಿ ಅಧ್ಯಯನಶೀಲರಾಗಬೇಕು. ಸಂಶೋಧನೆ ಕೈಗೊಳ್ಳಬೇಕು’ ಎಂದು ಬಿಇಟಿ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಹೇಳಿದರು.

ನಗರದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ನಡೆದ ಪ್ರಸಕ್ತ ಸಾಲಿನ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಇದು ಸ್ಪರ್ಧಾತ್ಮಕ ಯುಗವಾಗಿದ್ದು, ಅದಕ್ಕೆ ತಕ್ಕಂತೆ ಸಿದ್ಧತೆ ಕೈಗೊಳ್ಳುವುದು ಸಹ ಅಗತ್ಯವಾಗಿದೆ. ಯಾವುದೇ ಕ್ಷೇತ್ರ ಅಥವಾ ವೃತ್ತಿ ಆಯ್ಕೆ ಮಾಡಿಕೊಂಡರೂ ಸತತ ಶ್ರಮಪಡಬೇಕಾಗುತ್ತದೆ. ಪ್ರಾಮಾಣಿಕತೆ, ಆತ್ಮವಿಶ್ವಾಸವೇ ನಿಮ್ಮನ್ನು ಎತ್ತರೆತ್ತರಕ್ಕೆ ಒಯ್ಯುತ್ತದೆ’ ಎಂದರು.

ಕಲಬುರಗಿ ಕೇಂದ್ರೀಯ ವಿಶ್ವವಿದ್ಯಾಲಯದ ಎಂಬಿಎ ವಿಭಾಗದ ಸಂಯೋಜಕಿ ಸುಷ್ಮಾ ಎಚ್. ಮಾತನಾಡಿ, ‘ಪ್ರತಿಯೊಬ್ಬರೂ ತಾಂತ್ರಿಕ ಕೌಶಲ ಬೆಳೆಸಿಕೊಳ್ಳಬೇಕು. ಜೊತೆಯಲ್ಲಿಯೇ ತಂದೆ–ತಾಯಿ ಮತ್ತು ಗುರು–ಹಿರಿಯರಿಗೆ ಗೌರವ ನೀಡಿ ಜೀವನ ಉತ್ತಮಗೊಳಿಸಬೇಕು’ ಎಂದು ಸಲಹೆ ನೀಡಿದರು.

### ಮುಖ್ಯಾಂಶಗಳು

- ಬಿಇಟಿ ಕಾಲೇಜಿನಲ್ಲಿ ಕಾರ್ಯಕ್ರಮ
- 96 ಜನರಿಗೆ ಎಂಜಿನಿಯರಿಂಗ್ ಪದವಿ
- ಎಲ್ಲೆಡೆ ಸಂಭ್ರಮದ ವಾತಾವರಣ

**ಪದವಿ ಪಡೆದ ಬಳಿಕ ಎದುರಾಗುವ ಹೊಸ ಜಗತ್ತಿನ ವಿಭಿನ್ನ ಅವಕಾಶಗಳನ್ನು ಬಳಸಿಕೊಳ್ಳುವುದಲ್ಲದೆ ನವೀನ ಸವಾಲುಗಳು ಸ್ವೀಕರಿಸಲು ಸಿದ್ಧರಾಗಬೇಕು**

**ಅಶೋಕಕುಮಾರ ವಣಗೇರಿ,** ಪ್ರಾಚಾರ್ಯ

ಕಾಲೇಜಿನ ಪ್ರಾಚಾರ್ಯ ಅಶೋಕಕುಮಾರ ವಣಗೇರಿ ಮಾತನಾಡಿ, ‘ನೀವು ಕಾಲೇಜಿನಲ್ಲಿ ಪಡೆದ ಜ್ಞಾನವನ್ನು ಸಮಾಜದ ಒಳಿತಿಗಾಗಿ ಉಪಯೋಗಿಸಬೇಕು. ಉನ್ನತ ಗುರಿ ಹೊಂದಿ ಅದನ್ನು ಸಾಧಿಸಲು ಪ್ರಯತ್ನಿಸಬೇಕು’ ಎಂದು ಹೇಳಿದರು.

ಕಾಲೇಜಿನ ಉಪ ಪ್ರಾಚಾರ್ಯ ಅರುಣಮಕುಮಾರ ಯಲಾಲ್, ಕುಲಸಚಿವ ಪ್ರೇಮಸಾಗರ ಪಾಟೀಲ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಸುವರ್ಣಲತಾ, ಸಂಜೀವಕುಮಾರ ಜಲ್ದೆ, ಅನಿಲ ಪಾಟೀಲ, ರಾಹುಲ್ ರೆಡ್ಡಿ, ವಿದ್ಯಾಸಾಗರ ಮೂಲಗೆ, ಗುರುರಾಜ ಪಟವಾರಿ, ಪ್ರೀತಿ ಬಿರಾದಾರ, ಹರಿಕಾ ಕಲ್ಲೂರು, ಅನಿಲಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

Publication Date
20/07/2026

Presented by

VK
ವಿಜಯ ಕರ್ನಾಟಕ

NAMMA BIDAR

20 JUL 2026

# ಹೊಸ ತಂತ್ರಜ್ಞಾನಗಳ ಸಂಶೋಧನೆ ನಡೆಸಿ

**ವಿಕ ಸುದ್ದಿಲೋಕ** ಬಸವಕಲ್ಯಾಣ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪದವಿ ಪಡೆದರೆ ಸಾಲದು. ಹೊಸ ತಂತ್ರಜ್ಞಾನಗಳ ಬಗ್ಗೆ ನಿರಂತರ ಅಧ್ಯಯನ ಮತ್ತು ಸಂಶೋಧನೆ ನಡೆಸಬೇಕು ಎಂದು ಬಸವಕಲ್ಯಾಣ ಎಜ್ಯುಕೇಷನಲ್ ಟ್ರಸ್ಟ್ ಉಪಾಧ್ಯಕ್ಷ ದಿಲೀಪಕುಮಾರ ಎಸ್. ತಾಳಂಪಳ್ಳಿ ಹೇಳಿದರು.

ನಗರದ ಹೊರವಲಯದಲ್ಲಿರುವ ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನಲ್ಲಿ (ಬಿಇಟಿ) ಶನಿವಾರ ನಡೆದ 2025-26ನೇ ಸಾಲಿನ ಪದವಿ ಪ್ರದಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಲಬುರಗಿಯ ಕೇಂದ್ರೀಯ ವಿವಿಯ ಎಂಬಿಎ ವಿಭಾಗದ ಸಂಯೋಜಕಿ ಡಾ.ಸುಷ್ಮಾ ಎಚ್. ಮಾತನಾಡಿ, ಇಂದಿನ ಯುವಕರು ತಾಂತ್ರಿಕ ಕೌಶಲದೊಂದಿಗೆ ಉತ್ತಮ ವ್ಯಕ್ತಿತ್ವ



ಬಸವಕಲ್ಯಾಣ ಹೊರವಲಯದಲ್ಲಿರುವ ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನಲ್ಲಿ 2025-26ನೇ ಸಾಲಿನ ಪದವಿ ಪ್ರದಾನ ಸಮಾರಂಭ ನಡೆಯಿತು.

ಬೆಳೆಸಿಕೊಳ್ಳಬೇಕು. ತಂದೆ-ತಾಯಿ, ಗುರು-ಹಿರಿಯರಿಗೆ ಗೌರವ ನೀಡುವುದು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಸಹೋದ್ಯೋಗಿಗಳು ಹಾಗೂ ಅಧೀನ ಸಿಬ್ಬಂದಿಯೊಂದಿಗೆ ವಿನಯದಿಂದ ವರ್ತಿಸಿ ಕರ್ತವ್ಯನಿಷ್ಠೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಕಾಲೇಜಿನ ನಿರ್ದೇಶಕ ಡಾ. ಅಶೋಕಕುಮಾರ ವಣಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾಲೇಜಿನ ಉಪಪ್ರಾಚಾರ್ಯ ಡಾ. ಅರುಣಕುಮಾರ ಯಲಾಲ್, ಕುಲಸಚಿವ ಪ್ರೇಮಸಾಗರ ಪಾಟೀಲ್, ವಿಭಾಗ ಮುಖ್ಯಸ್ಥರಾದ ಸುವರ್ಣಲತಾ, ಡಾ. ಸಂಜೀವಕುಮಾರ ಜಲ್ದೇ, ಡಾ.ಅನಿಲ ಪಾಟೀಲ್, ರಾಹುಲ ರೆಡ್ಡಿ, ವಿದ್ಯಾಸಾಗರ ಮೂಲಗೆ, ಗುರುರಾಜ ಪಟವಾರಿ ಇತರರಿದ್ದರು. ಪ್ರೀತಿ ಬಿರಾದರ್ ನಿರೂಪಿಸಿದರು. ಹರೀಕಾ ಕಲ್ಲೂರ ನಿರೂಪಿಸಿದರು. ಡಾ.ಅನಿಲ ಪಾಟೀಲ್ ವಂದಿಸಿದರು.

> ಭಾರತೀಯ ಸಂಸ್ಕಾರ ಮತ್ತು ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶ್ರಮ, ಪ್ರಾಮಾಣಿಕತೆ ಹಾಗೂ ಆತ್ಮವಿಶ್ವಾಸದಿಂದ ಜೀವನದಲ್ಲಿ ಮುನ್ನಡೆಯಬೇಕು. ತಮ್ಮ ಜ್ಞಾನವನ್ನು ಸಮಾಜದ ಒಳಿತಿಗೆ ಹಾಗೂ ದೇಶದ ಅಭಿವೃದ್ಧಿಗೆ ಬಳಸಬೇಕು.
>
> **-ದಿಲೀಪಕುಮಾರ ತಾಳಂಪಳ್ಳಿ,**
> ಉಪಾಧ್ಯಕ್ಷರು, ಬಿಇಟಿ ಬಸವಕಲ್ಯಾಣ.



College management board chairman Dilipkumar Talamapalli light the ceremonial lamp during the graduation ceremony held at BET Engineering College in Basavakalyan on Saturday. Ashokumar Vanageri and others were present on the occasion. DH PHOTO